ದಿನಾಂಕ 19.07.2021 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ವಾದಿ ಪರ ಶ್ರೀ ಇ.ಎನ್. ವಕೀಲರಿಂದಃ

3. 1 ನೇ ಪ್ರತಿವಾದಿ ನನ್ನ ಅತ್ತೆ ಇರುತ್ತಾರೆ. ಆರ್ ಸಿ ಪಾಟೀಲ್ ನನ್ನ ಮಾವ ಇರುತ್ತಾರೆ. ನನ್ನ ಮಾವನ ತಂದೆ ಹೆಸರು ಗೊತ್ತಿಲ್ಲ. ನನ್ನ ಮಾವನ ತಾಯಿ ಹೆಸರು ಗೌರಮ್ಮ ಇರುತ್ತಾರೆ. ಆರ್ ಸಿ ಪಾಟೀಲ್ ಇವರ ಅಜ್ಜನ ಹೆಸರು ಚನ್ನಬಸಪ್ಪಗೌಡ ಇರುತ್ತದೆ. ಚನ್ನಬಸಪ್ಪಗೌಡ ಇವರು ಆರ್ ಸಿ ಪಾಟೀಲ್ ಇವರ ತಂದೆ ಎಂದರೆ ಸರಿ. ಗೌರಮ್ಮನ ಗಂಡ ಚನ್ನಬಸಪ್ಪಗೌಡ ಎಂದರೆ ಸರಿ. ಚನ್ನಬಸಪ್ಪಗೌಡ ಇವರಿಗೆ ಇಬ್ಬರು ಹೆಂಡತಿ ಇದ್ದು, ಮೊದಲನೇ ಹೆಂಡತಿ ಪಾರ್ವತಮ್ಮ ಮತ್ತು ಎರಡನೇ ಹೆಂಡತಿ ಗೌರಮ್ಮ ಎಂದರೆ ಸರಿ. ಬಂಗಾರಮ್ಮ, ಸಾವಂತ್ರಮ್ಮ  ನೀಲಮ್ಮ, ಮಲ್ಲನಗೌಡ, ರುದ್ರಗೌಡ, ದ್ರಾಕ್ಷಾಯಣಮ್ಮ, ಸುಶೀಲಗೌಡ ಇವರು ಚನ್ನಬಸಪ್ಪ ಮತ್ತು ಗೌರಮ್ಮ ಇವರಿಗೆ ಜನಿಸಿದ ಮಕ್ಕಳು ಎಂದರೆ ಸರಿ. ಪಾರ್ವತಮ್ಮ ಇವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಜನಿಸಿದ್ದರು ಎಂದರೆ ಗೊತ್ತಿಲ್ಲ. ಪಾರ್ವತಮ್ಮ ಇವರ ಒಬ್ಬ ಹೆಣ್ಣುಮಗು ಮತ್ತು ಒಬ್ಬ ಗಂಡುಮಗು ಸಣ್ಣ ವಯಸ್ಸಿನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಪಾರ್ವತಮ್ಮ ಇವರಿಗೆ ಗಂಗಮ್ಮ ಎನ್ನುವ ಮಗಳು ಇದ್ದರು ಎಂದರೆ ಸರಿ. ಗಂಗಮ್ಮ ಇವರ ಮದುವೆ ವೀರಪ್ಪಗೌಡ ಇವರೊಂದಿಗೆ ಆಗಿತ್ತು ಎಂದರೆ ಸರಿ. ಸದರಿ ಗಂಗಮ್ಮ ಮೊದಲ ಹೆರಿಗೆ ಸಮಯದಲ್ಲಿ ಆಕೆ ಮತ್ತು ಮಗು ತೀರಿಕೊಂಡರು ಎಂದರೆ ಗೊತ್ತಿಲ್ಲ.

4. ನನಗೆ ಚನ್ನಬಸಪ್ಪಗೌಡರ ತಾಯಿಯ ಹೆಸರು ಗೊತ್ತಿಲ್ಲ. ಚನ್ನಬಸಪ್ಪಗೌಡ ಇವರನ್ನು ಸಾವಮ್ಮ ದತ್ತಕ್ಕೆ ಪಡೆದಿದ್ದರು ಎಂದರೆ ಗೊತ್ತಿಲ್ಲ. ಚನ್ನಪ್ಪಗೌಡನಿಗೆ ಚನ್ನಬಸಪ್ಪಗೌಡ ಮಗ ಇರುತ್ತಾರೆ. ಚನ್ನಪ್ಪಗೌಡರಿಗೆ ಬಸನಗೌಡ ಎಂಬ ಮಗ ಸಾಲಿಬಸಮ್ಮ ಇವರಿಂದ ಜನಿಸಿದ್ದ ಎಂದರೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದಿನ ಪಾಟಿ ಸವಾಲಿಗೆ ವಕೀಲರು ಸಮಯ ಕೇಳಿದ್ದು, ಅವರ ವಿನಂತಿ ಮೇರೆಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸೊರಬ.